ಕೋಪದಲ್ಲಿಯೇ, ತಪಸ್ಸನ್ನು ಮತ್ತೊಮ್ಮೆ ಕರೆದು, 'ಇದನ್ನೂ ನೀರು ಹಾಕಿ ತೊಳೆದೆಯೇನೋ, ಕತ್ತೆ...' ಎಂದು ಅಬ್ಬರಿಸಿದೆ. 'ನೈ ಸಾ ನೈ ಸಾಬ್...' ಅನ್ನುತ್ತ ಬೆದರಿ ಒದ್ದೆ ಗುಬ್ಬಚ್ಚಿಯ ಹಾಗೆ ಮುದುಡಿನಿಂತ. ಅಷ್ಟರಲ್ಲಿ ಶ್ರೀಕಂಠ ಬಂದು, ಕೀಬೋರ್ಡನ್ನೊಮ್ಮೆ ಉಲ್ಟಾಗೈದು ಹಿಂದಿನಿಂದ ಹಗೂರಕ್ಕೆ ತಟ್ಟಿದ. ಎಲ್ಲಿದ್ದವೋ ಏನೋ, ಒಂದೆರಡು ದರ್ಭೆಯ ಕುಡಿಗಳು ಕೀಲ್ಸಂದಿನಿಂದ ಇಣಿಕಿ ಕಂಡವು. ಎದೆ ಧಸಕ್ಕನೆ ಜರಿದು ಹೂತುಹೋಯಿತು! ಶ್ರೀಕಂಠ, ಸ್ಕ್ರೂಡ್ರೈವರಿಕ್ಕಿ ಕೀಬೋರ್ಡನ್ನು ಬಿಚ್ಚಿದ. ನೋಡಿದರೆ, ಒಳಗೆ ಹತ್ತಾರು ದರ್ಭೆಯ ತುಣುಕುಗಳು ಬಿಡೆಯಿರದೆ ಸಿಲುಕಿ, ಕೀಲಿಗಳ ಕೀಲನ್ನೇ ತೊಡರಿ ತಡೆದಿದ್ದವು! ನಮ್ಮೀ ತಪಸ್‌ಮಹಾಶಯನು, ಹಿಂದಿನ ದಿವಸ ಎಲ್ಲೆಲ್ಲೂ ಹಾಕಿಮಿಕ್ಕ ದರ್ಭೆಯನ್ನೆಲ್ಲ ಕೀಬೋರ್ಡೊಳಗೆ ತುರುಕಿ ನನ್ನ ಕಣ್ಣಿಗೆ ಬೀಳದಂತೆ ಎಚ್ಚರವಹಿಸಿದ್ದ! ವಿಚಾರಿಸಿದ್ದಕ್ಕೆ, 'ಕಂಡರೆ ಬೈತೀರಿ ಅಲ್ಲವಾ, ಸಾಜೀ... ನೀವು ನಮಗೆಲ್ಲ ಮಾಲೀಕ. ನಿಮ್ಮ ಕೆಲಸ ಚೆನ್ನಾದರೆ ತಾನೇ ನಮಗೆಲ್ಲ ದುಡ್ಡು! ನಿಮ್ಮ ಕಂಪ್ಯೂಟರಿಗೆ ಗ್ರಹಣ ಹಿಡೀದಿರಲಿ ಅಂತ ಹೀಗೆ ಮಾಡಿದೆ!' ಅಂತಂದ. 'ಯೋಯ್... ನಿನ್ನ ತಲೆ ಕುಟ್ಟಾ!!' ಎಂದು ಕೂಗಾಟ ಮುಂದುವರೆಸಿದೆ.

ಸಂಜೆಯ ಮೇಲೆ, ಅಮ್ಮ ಕಣ್ಮಣಿಯಂತಹ ಹುಡುಗನನ್ನು ಹಳಿದಿದ್ದೇತಕ್ಕೆಂದು ಪ್ರಶ್ನಿಸಿ, ನನ್ನನ್ನೇ ಅಡ್ಡಂಬಡ್ಡ ಜರೆದಳು! 'ಏನೋ ತಪ್ಪಾಗಿಹೋಗುತ್ತೆ... ಸಮಾಧಾನ ತಂದುಕೋಬೇಕು... ಆಗಿದ್ದಾದ ಮೇಲೆ ಕೂಗೋದರಿಂದ ಸಮಸ್ಯೆ ಬಗೆಹರಿಯುತ್ತಾ?' ಎಂದು ತಪಸ್ಸನ್ನು ವಹಿಸಿಕೊಂಡು ಆಡಿದಳು. ಅಮ್ಮ ಅತಾರ್ಕಿಕವಾಗಿ ಆಡಿದಳೆಂದು ನಾನೂ ನನ್ನ ಕೆಲಸದ ತುರ್ತಿನ ತರ್ಕ ಮಂಡಿಸಿ, ಅವಳೂ ವಾಪಸಾಡಿ, ಮಾತಿಗೆ ಮಾತು ಬೆರೆತು ಜಗಳವೇ ಆಗಿಹೋಯಿತು! ಈ ನಡುವೆ ನನ್ನ ಹೆಂಡತಿಯೂ ನನ್ನಮ್ಮನ ಪರವಹಿಸಿ ಗಂಡಾಗುಂಡಿಯೇ ಜರುಗಿಬಿಟ್ಟಿತು! ಮನೆಯಲ್ಲಿರುವ ಮೂವರೂ ಮೂರು ದಿಕ್ಕಿಗೆ ಬೆನ್ನಿಕ್ಕಿ ಮಲಗಿದೆವು!!

ನನಗೆ ಸುಮಾರು ಹೊತ್ತು ನಿದ್ರೆ ಬರಲಿಲ್ಲ. ಚಂದ್ರಗ್ರಹಣದ ಬಳಿಕ ಪಾಡ್ಯದ ರಾತ್ರಿ; ಸಂಜೆಯ ಸುಮಾರಿಗೆ ಮಳೆ ನಿಂತು ಬಾನು ತಿಳಿಯಾಗಿದ್ದರಿಂದ, ಕತ್ತಲಿನ ಕೋಣೆಯಲ್ಲಿ ಬೆಳದಿಂಗಳು ಹಬ್ಬಿತ್ತು. ಹೊರಗೆ ತಂಪಡರಿದ್ದೂ ಮನಸ್ಸು ಮಾತ್ರ ಕುದಿಯುತ್ತಲೇ ಇತ್ತು. ಯಾರು ಸರಿ, ಯಾರು ತಪ್ಪೆನ್ನುವ ಜಿಜ್ಞಾಸೆ. ಇವರು ನಂಬುವ ಬ್ರಾಹ್ಮಣ್ಯಕ್ಕೇ ನಾನೂ ಅಂಟಿಕೊಂಡಿದ್ದ ಪಕ್ಷಕ್ಕೆ, ಈ ಪರಿಯ ಸಂಕಷ್ಟವೇ ಇರದಷ್ಟೆ? ನಾನು ನನ್ನ ಆರ್ಕಿಟೆಕ್ಚಿಕೆ ಮತ್ತು ತನ್ನಿಮಿತ್ತದ ಲೋಕಾರ್ಥವನ್ನು ಮರೆತು ಕಡುಮೌಢ್ಯದ ಏಕಾರ್ಥದೊಳಕ್ಕೆ ಬೆರೆತುಹೋದರೆ ಸಮಸ್ಯೆಯೇ ಇಲ್ಲವಷ್ಟೆ? ಪ್ರಾಪಂಚಿಕ ಆಧುನಿಕತೆಯನ್ನು ನೆಚ್ಚಿದ್ದೇನಾಗಿ ತಾನೇ ಈ ಪರಿಯ ಶಾಸ್ತ್ರ ಸಂಪ್ರದಾಯಗಳು ಗೊಡ್ಡೆನಿಸುವುದು? ಸುಮಾರು ಹೊತ್ತು ಸಂದಿಗ್ಧದಲ್ಲೇ ತೂಗಿದ್ದಾಯಿತು.

ನಾನೇ ನಾನಾದ ನನ್ನ ಪಂಗಡವೂ, ಅಮ್ಮ–ಹೆಂಡತಿಯರ ವಿರುದ್ಧಬಣವೂ ರಾಜಿಯಾಗಲಿಕ್ಕೆ ಒಂದು ಪಕ್ಷವೇ ಬೇಕಾಯಿತೇನೋ! ಮೌನವೂ ಮೋಸವೆನ್ನುವ ಅವಾಕ್ಕಿಗೀಡಾಗಿ ಮೂವರೂ ಬದುಕಿದೆವು. ತಪಸ್ಸು ಮಾತ್ರ ನಮ್ಮ ನಡುವಿನ ಸಂಪರ್ಕದ ಕೊಂಡಿಯಂತಿದ್ದ. ಇಲ್ಲಿನದನ್ನು ಅಲ್ಲಿ, ಅಲ್ಲಿನದನ್ನು ಇಲ್ಲಿ ತಂದು ಒನ್ನಮೂನೆ ಸಂವಾಹಕನಾಗಿದ್ದ. ಮೊದಮೊದಲು, ಇವನಿಂದ ತಾನೇ ಇಷ್ಟು ರಾದ್ಧಾಂತವೆಂದು ಮುನಿದರೂ, ಕ್ರಮೇಣ ಪಾಪದವನನ್ನಿಸಿ ಮಾತಿಗೆ ತೊಡಗಿದ್ದಾಯಿತು. ನಿಧಾನವಾಗಿ, ಅಮ್ಮ ಮತ್ತು ಹೆಂಡತಿಯೂ ಮಾತಾಡತೊಡಗಿದರು. ತಾವಾಗಿಯೇ ಮಾತು ಹೊಂಚಿಕೊಂಡು ರಾಜಿಯಾದರು. ಗಣೇಶನ ಹಬ್ಬ ಮುಗಿದ ಮೇಲೆ, ಇಷ್ಟು ಸಲೀಸಾಗಿ ಜಗಳವಿತ್ಯರ್ಥವಾಗಿದ್ದೆಂತೆಂದು ಅರ್ಥವಾಯಿತು. ತಂತಾನೇ